ಹರಿದು ಬರುತ್ತಿದ್ದವೇ ಹೊರತು ಭೈರಪ್ಪನವರು ನಿರ್ಬಂಧಕ್ಕೆ ಒಳಗಾಗಿದ್ದರು. ಪ್ರಪಂಚವು ಹಾಗೆಯೇ ಮುಂದುವರಿದಿದ್ದರೆ 'ಭೈರಪ್ಪನವರದ್ದು ವಂಚಿಸಿ ರಂಜಿಸುವ ಕಲೆ' ಎಂದು ನವ್ಯದ ಪ್ರಮುಖರು ಕೊಟ್ಟ ತೀರ್ಪನ್ನು ಭೈರಪ್ಪನವರಿಗೆ ಅವರ ಜೀವಿತಾವಧಿಯಲ್ಲಿ ದಾಟಲಾಗುತ್ತಲೇ ಇರಲಿಲ್ಲವೇನೋ.

ಆದರೆ ಹಾಗಾಗಲಿಲ್ಲ.

ಭಾರತದ ರಾಜಕೀಯ ಮಾರುತವು ತೊಂಬತ್ತರ ದಶಕದಲ್ಲಿ ಬಲವಾಗಿ ದಿಕ್ಕು ಬದಲಿಸಿಕೊಂಡಿತು. ಕಮ್ಯುನಿಸಂ ಪ್ರೇರಿತ ಎಡ ಸಿದ್ಧಾಂತಕ್ಕೆ ಬಲ ಸಿದ್ಧಾಂತದ ಪ್ರತಿರೋಧವು ರೂಪಿತವಾಯಿತು. ಜೊತೆಗೇ, ತೊಂಬತ್ತರ ದಶಕದ ಆರ್ಥಿಕ ಜಾಗತೀಕರಣ, ಜನಜೀವನಕ್ಕೆ ಮಿಳಿತವಾದ ಮಾಧ್ಯಮ ತಂತ್ರಜ್ಞಾನಗಳು– ಇದ್ದಕ್ಕಿದ್ದಂತೆ ಹತ್ತಿರವಾದ ಪುಸ್ತಕಗಳು, ವಿಚಾರಗಳು, ದೇಶವಿದೇಶಗಳು ಎಲ್ಲವೂ ಜನರ ಚಿಂತನೆಯ ವಿಧಾನಗಳನ್ನೇ ಬದಲಿಸಿದವು. ಯಾವ ಸಿದ್ಧಾಂತಗಳು ಹತ್ತಿರವೆಂದು ಬಗೆದಿದ್ದವೋ ಅವು ದೂರವಾದವು ಮತ್ತು ಯಾವುವು ದೂರವಾಗಿದ್ದವೋ ಅವು ಹತ್ತಿರವಾದವು. ತೊಂಬತ್ತರ ದಶಕವು ದೊಡ್ಡ ಸಂಖ್ಯೆಯಲ್ಲಿ ಎಂಜಿನಿಯರುಗಳನ್ನು ಸೃಷ್ಟಿಸಿದಂತೆಯೇ ಹೊಸ ತಲೆಮಾರಿನ ಕನ್ನಡ ಓದುಗರನ್ನೂ ಸೃಷ್ಟಿಸಿತು. ಎಸ್.ಎಲ್. ಭೈರಪ್ಪ ಹೊಸ ಓದುಗರ ಕಣ್ಮಣಿಯಾದರು. ನನಗೆ ಚೆನ್ನಾಗಿ ನೆನಪಿದೆ. ಇದು 1998ರಲ್ಲಿ ಇರಬೇಕು. ಅಮೆರಿಕದ ಕ್ಯಾಲಿಫೋರ್ನಿಯಾದಲ್ಲಿ 'ಅಮೆರಿಕನ್ನಡ' ಪತ್ರಿಕೆ ಖ್ಯಾತಿಯ ಎಸ್.ಕೆ. ಹರಿಹರೇಶ್ವರರು ಒಮ್ಮೆ ಒಂದು ಕನ್ನಡ ಕಾರ್ಯಕ್ರಮದಲ್ಲಿ 'ನಿಮ್ಮ ಮೆಚ್ಚಿನ ಪುಸ್ತಕ ಯಾವುದು?' ಎಂದು ಕುತೂಹಲದಲ್ಲಿ ಕೇಳಿದಾಗ ಬಂದ ಐವತ್ತರಲ್ಲಿ ನಲ್ವತ್ತು ಮಂದಿ ಭೈರಪ್ಪನವರ ವಿವಿಧ ಕಾದಂಬರಿಗಳನ್ನು ಹೆಸರಿಸಿದ್ದರು.

ತಾತ್ತ್ವಿಕವಾಗಿ ಅವರನ್ನು ವಿರೋಧಿಸುತ್ತಿದ್ದವರಿಗೆ ಅವರ ಈ ಬಗೆಯ ಬೆಳವಣಿಗೆ, ಜನಪ್ರಿಯತೆ ಮತ್ತು ಅದಕ್ಕೆ ಕಾರಣವಾದ ಬದಲಾದ ಓದುಗ ನೆಲೆಗಳನ್ನು ಗುರುತಿಸಲಾಗಲೇ ಇಲ್ಲ. ಜನಪ್ರಿಯತೆಯನ್ನೇ ವಿರೋಧಿಸುವ ಮತ್ತು ಅದಕ್ಕೆ ಬೇರೆಬೇರೆ ಅರ್ಥಗಳನ್ನು ಕಟ್ಟುವ ಪ್ರಯತ್ನಗಳು ನಡೆದವು. ಒಮ್ಮೆ ಧಾರವಾಡದ ಸಾಹಿತ್ಯ ಸಂಭ್ರಮದಲ್ಲಿ ಒಬ್ಬ ಹಿರಿಯ ವಿಮರ್ಶಕರು 'ಭೈರಪ್ಪನವರ ಕೃತಿಗಳನ್ನು ಆರ್‌ಎಸ್‌ಎಸ್ ಹಂಚುತ್ತದೆ. ಹಾಗಾಗಿ, ಅವು ಹೆಚ್ಚಿಗೆ ಮಾರಾಟವಾಗುವಂತೆ ಕಾಣುತ್ತವೆ' ಎನ್ನುವ ಅರ್ಥದ ಮಾತುಗಳನ್ನಾಡಿದ್ದರು!

ಒಂದು ಬಗೆಯಲ್ಲಿ ಭಾರತದ ರಾಜಕೀಯ ಪಲ್ಲಟಗಳು ಮತ್ತು ದೇಶದಲ್ಲಿ ಮೂಡಿದ ಹೊಸ ಜಾಗೃತಿ ಮೋದಿಯವರಿಗೆ ಅವಕಾಶಗಳನ್ನು ಸೃಷ್ಟಿಸಿದ ರೀತಿಯಲ್ಲೇ ಸಾಹಿತ್ಯಿಕವಾಗಿ ಭೈರಪ್ಪನವರಿಗೂ ಒದಗಿಬಂದವು ಎನ್ನುವಲ್ಲಿ ನನಗೆ ಯಾವ ಮುಜುಗರವಿಲ್ಲ. ಹಾಗೆ ಒದಗಿ ಬಂದದ್ದನ್ನು ಅವರು ಸಮರ್ಥವಾಗಿ ಬಳಸಿಕೊಂಡರು. ಅವರ ತೊಂಬತ್ತರ ದಶಕದ ಮುಂಚಿನ ಕಾದಂಬರಿಗಳು ಮತ್ತು ನಂತರದವನ್ನು ಹೋಲಿಸಿದಲ್ಲಿ ಇದು ನಮಗೆ ಸ್ಪಷ್ಟವಾಗುತ್ತದೆ. 'ಸಾವಿರ ಉಳಿಪೆಟ್ಟು ಬಿದ್ರೆತಾನೆ ಕಲ್ಲು ಸಿವಲಿಂಗವಾಗೂದು? ಆದರೆ ಜಾಗ ನೋಡಿ ಹದ ಇಡಿದು ಹ್ವಡೀಬೇಕು' ಎನ್ನುತ್ತದೆ ಅವರ ಮಾದೇವಯ್ಯ ಪಾತ್ರ 'ಗೃಹಭಂಗ'ದಲ್ಲಿ. ಹಾಗೆ ಭೈರಪ್ಪನವರೂ ಪ್ರತಿ ಕಾದಂಬರಿಯನ್ನು ಜಾಗ ನೋಡಿ, ಕಾಲವಳೆದು, ಹದವಿಡಿದು ಸೃಷ್ಟಿಸಿದವರು.

ಹಾಗೆಯೇ, ಓದುಗ ಸಂಖ್ಯೆಯ ಗಣನೀಯ ಏರಿಕೆಯನ್ನೂ ತೊಂಬತ್ತರ ದಶಕವನ್ನು ಭಾಜಕವಾಗಿ ಇಟ್ಟು ನೋಡಿದರೆ ಇದು ಅರಿವಿಗೆ ಬರುತ್ತದೆ. ಉದಾಹರಣೆಗೆ, ಅವರ ಅತಿಜನಪ್ರಿಯ ಕಾದಂಬರಿ 'ಪರ್ವ' ಪ್ರಕಟವಾಗಿದ್ದು 1979ರಲ್ಲಿ. ಮುಂದಿನ 15 ವರ್ಷಗಳಲ್ಲಿ– ಅಂದರೆ 1995ರ ತನಕ– ಅದು ಮೂರು ಮರುಮುದ್ರಣಗಳನ್ನು ಮಾತ್ರ ಕಂಡಿದ್ದರೆ, ಅದರ ಮುಂದಿನ 15 ವರ್ಷಗಳಲ್ಲಿ 8 ಮರುಮುದ್ರಣಗಳನ್ನು ಮತ್ತು ತದನಂತರದ 15 ವರ್ಷಗಳಲ್ಲಿ 22 ಮರುಮುದ್ರಣಗಳನ್ನು ಕಂಡಿದೆ. ಈ ಬಗೆಯ ಓದುಗ ಸಂಖ್ಯೆಯ

